# ‘ಒಥೆಲೊ’ ನಾಟಕ

**ನಾಟಕ ರಚನೆ: <u>ಶೇಕ್ಸ್‌ಪಿಯರ್</u>**

**<u>ಪಾತ್ರಗಳ ಪರಿಚಯ :</u>**

**ಒಥೆಲೊ :** ವೆನಿಸ್‌ನ ಸೈನ್ಯದಲ್ಲಿ ಉನ್ನತ ಅಧಿಕಾರಿ, ಜನರಲ್, ಅವನು ಬಹಳ ಶಕ್ತಿವಂತ. ಎಲ್ಲರೂ ಅವನನ್ನು ಗೌರವಿಸುತ್ತಾರೆ, ತನ್ನ ಸದ್ಗುಣಗಳಿಂದ ಅವನು ಡೆಸ್ಡಿಮೋನಳ ಹೃದಯವನ್ನು ಗೆಲ್ಲುತ್ತಾನೆ. ಆದರೆ ಸ್ವಲ್ಪ ಕಾಲಾನಂತರ ಅವನಿಗೆ ಜನಾಂಗೀಯ ಮತ್ತು ಸಾಂಸ್ಕೃತಿಕ ವ್ಯತ್ಯಾಸಗಳಿಂದ ಅಭದ್ರತೆಯ ಭಾವನೆಯುಂಟಾಗಿ ಡೆಸ್ಡಿಮೋನಳನ್ನು ಕೊಲ್ಲುತ್ತಾನೆ.

**ಡೆಸ್ಡಿಮೋನ** :ಇವಳು ಬ್ರಬ್ಯಾಂನ್ಷಿಯೊನ ಲಾವಣ್ಯವತಿ ಮಗಳು, ಒಥೆಲೊನ ಹೆಂಡತಿ. ಅವಳು ತೀರ ಮೃದು ಸ್ವಭಾವದವಳಾಗಿ ಕಾಣುತ್ತಾಳೆ, ಆದರೆ ದೃಢ ಮನಸ್ಸಿನವಳು ಮತ್ತು ಆತ್ಮವಿಶ್ವಾಸ ಇರುವ ಮಹಿಳೆ.

**ಇಯಾಗೊ :** ಇವನು ಒಥೆಲೊನ ಸಹಾಯಕ ಅಧಿಕಾರಿ ಮತ್ತು ನಾಟಕದ ಖಳನಾಯಕ. ಇವನು ಬಹಳ ಉಪಾಯದಿಂದ ಜನರನ್ನು ಆಡಿಸುತ್ತಾನೆ, ಧೈರ್ಯವಂತ ಆದರೆ ನಿಷ್ಕರುಣಿ, ಒಥೆಲೊ ಮತ್ತು ಕ್ಯಾಸಿಯೊ ಇವರ ಮೇಲೆ ಮುಯ್ಯಿ ತೀರಿಸಿಕೊಳ್ಳಲು ಇವನಿಗೆ ಹಲವಾರು ಪ್ರೇರಣೆಗಳಿವೆ.

**ಕ್ಯಾಸಿಯೊ :** ಇವನು ಸೈನ್ಯದಲ್ಲಿ ಒಥೆಲೊ ನಂತರ ಎರಡನೆಯ ಅಧಿಕಾರಿ, ತರುಣ, ಸ್ಫುರದ್ರೂಪಿ. ಆದರೆ ಯುದ್ಧದ ಅನುಭವವಿಲ್ಲ. ಸೈನ್ಯದಲ್ಲಿ ಇವನ ಸ್ಥಾನವನ್ನು ಆಟದ ಕಾಯಿಯಾಗಿ ಬಳಸಿಕೊಳ್ಳುತ್ತಾನೆ.

**ಒಥೆಲೊ, ವೆನಿಸ್‌ನ ಮೂರ್**

ಬ್ರಬ್ಯಾಂನ್ಷಿಯೊ ವೆನಿಸ್‌ನ ಅತ್ಯಂತ ಶ್ರೀಮಂತ ಸೆನೆಟರುಗಳಲ್ಲಿ ಒಬ್ಬ. ಅವನಿಗೆ ಡೆಸ್ಡಮೋನ ಎಂಬ ಅತಿ ಲಾವಣ್ಯವತಿ ಮಗಳು. ವೆನಿಸ್‌ನ ಪುರುಷರಿಗೆಲ್ಲ ಅವಳ ಹುಚು.

**ರಾಡ್‌ರೀಗಜ್ :** ಡೆಸ್ಡಮೋನಳನ್ನು ಅತಿಯಾಗಿ ಪ್ರೀತಿಸುತ್ತಿದ್ದವನು.

**ಎಮಿಲಿ :** ಇಯಾಗೊ ಹೆಂಡತಿ ಮತ್ತು ಡೆಸ್ಟಿಮೊನಳ ಆಪ್ತಸಖಿ.

---

## <u>ದೃಶ್ಯ – 1</u>

**(ಸೆನೆಟ್ ಭವನದಲ್ಲಿ ಎಲ್ಲಾ ಸೆನೆಟ್‌ನ ಸದಸ್ಯರು ಹಾಜರಿದ್ದಾರೆ. ಅಲ್ಲಿಗೆ ಬ್ರಬ್ಯಾಂನ್ಷಯೊ ಬಹಳ ದುಃಖದಿಂದ ಆಗಮಿಸುತ್ತಾನೆ)**

**ಬ್ರಬ್ಯಾಂನ್ಷಯೊ** : ಸೆನೆಟ್‌ನ ಸದಸ್ಯರೇ ದಯಮಾಡಿ ನ್ಯಾಯ ದೊರಕಿಸಿಕೊಡಿ. ಕಪ್ಪು ಮೂರ್(ಒಥೆಲೊ)ನು ಏನು ತಿಳಿಯದ ನನ್ನ ಮಗಳ ಮೇಲೆ ಮಾಟಮಂತ್ರಗಳನ್ನು ಬಳಸಿ ಅವಳನ್ನು ಅಪಹರಿಸಿದ್ದಾನೆ.

**(ಅದೇ ಸಮಯಕ್ಕೆ ಸರಿಯಾಗಿ ಓಡಿ ಬಂದ ಸೈನಿಕ)**

**ವೆನಿಸ್‌ನ ಸೈನಿಕ :** ಸೈಪ್ರಸ್ ಕೋಟೆಯನ್ನು ವೆನಿಸಿಯರಿಂದ ಮತ್ತೆ ವಶಮಾಡಿಕೊಳ್ಳಲು ತುರ್ಕಿಯವರು ಮತ್ತೆ ಕೋಟೆ ಮೇಲೆ ಮುತ್ತಿಗೆ ಹಾಕಿದ್ದಾರೆ.

**(ಚಪ್ಪಾಳೆ ಹೊಡೆದು ಕರೆಯುವಂತೆ ಆದೇಶಿಸುವುದು)**

**ಸೆನೆಟ್ ಸದಸ್ಯ :** ಒಥೆಲೊನನ್ನು ಕೂಡಲೇ ಸೆನೆಟ್ ಭವನಕ್ಕೆ ಕರೆತನ್ನಿ.

**(ಒಥೆಲೋನ ಆಗಮನ)**

**ಒಥೆಲೋ** : ನನ್ನನ್ನು ಈ ಸಭೆಗೆ ಅಪರಾಧಿಯಾಗಿ ಕರೆಸಿದ ಉದ್ದೇಶವೇನು?
ನಾನೇನು ಅಪರಾಧ ಮಾಡಿದ್ದೇನೆ ಹೇಳಿ?

**ಬ್ರಬ್ಯಾಂನ್ಷಿಯೊ :** (ಭಾವೋದ್ರಿಕ್ತನಾಗಿ) ನನ್ನ ಮನೆಗೆ ಒಥೆಲೊ ಬಂದಾಗಲೆಲ್ಲ ತನ್ನ ಸಾಹಸ ಕಥೆಗಳನ್ನು ಹೇಳಿ, ಡೆಸ್ಡಿಮೋನಳ ಹೃದಯವನ್ನು ಗೆದ್ದಿದ್ದರಿಂದ ನನ್ನ ಮಗಳು ಇವನ ಜಾಲಕ್ಕೆ ಸಿಲುಕಿದ್ದಾಳೆ.

**(ಡೆಸ್ಡಿಮೋನಳ ಆಗಮನ)**

**ಡೆಸ್ಡಿಮೋನ** : ನನ್ನ ತಂದೆ ತಪ್ಪು ತಿಳಿದಿದ್ದಾರೆ. ನನ್ನ ಬದುಕು ಮತ್ತು ಶಿಕ್ಷಣಗಳಿಗೆ ತನ್ನ ತಂದೆಗೆ ಋಣಿಯಾಗಿದ್ದರೂ ನಾನಾಗಿಯೇ ಅಥೆಲೊನನ್ನು ಮದುವೆಯಾಗಲು ಒಪ್ಪಿದ್ದೇನೆ. ಇದರಲ್ಲಿ ಒಥೆಲೊ ಯಾವುದೇ ಅಪರಾಧ ಎಸಗಿಲ್ಲ. ಇಬ್ಬರೂ ಪರಸ್ಪರ ಒಪ್ಪಿ ಮದುವೆಯಾಗಿದ್ದೇವೆ.

**ಸೆನೆಟ್ ಸದಸ್ಯ :** ಈ ಪ್ರಕರಣದಲ್ಲಿ ಡೆಸ್ಟಿಮೊನ ಹೇಳಿದ ನಿಜಾಂಶದಿಂದ ಒಥೆಲೊ ನಿರಪರಾಧಿ ಎಂದು ನಿಸ್ಸಂದೇಹವಾಗಿ ತೀರ್ಮಾನಿಸಲಾಗಿದೆ. **(ಬ್ರಬ್ಯಾಂನ್ಷಿಯೊ ಒಥೆಲೊನ ಬಳಿ ಬಂದು ದುಃಖ ಮತ್ತು ಯಾತನೆಯಿಂದ)**

**ಬ್ರಬ್ಯಾಂನ್ಷಿಯೊ :** “ನಿನಗೆ ಕಣ್ಣುಗಳಿದ್ದರೆ ಇವಳನ್ನು ಚೆನ್ನಾಗಿ ನೋಡು, ನಿನಗೂ ಮೋಸ ಮಾಡಬಹುದು”.

**(ಎಲ್ಲರು ಹೊರ ನಡೆಯುತ್ತಾರೆ. ಡೆಸ್ಡಿಮೋನ ಮತ್ತು ಒಥೆಲೊ ಅಲ್ಲೇ ನಿಲ್ಲುತ್ತಾರೆ)**

**ಡೆಸ್ಡಿಮೋನ** : ಸೈಪ್ರಸ್ ನೌಕಾಯಾನದಲ್ಲಿ ನಿಮ್ಮ ಜೊತೆ ನಾನು ಬರಬಹುದೇ?

**ಒಥೆಲೊ :** (ಸಂತೋಷದಿಂದ) ನಿನ್ನನ್ನು ನನ್ನೊಡನೆ ಕರೆದೊಯ್ಯಲು ನನಗೆ ಒಪ್ಪಿಗೆ ಇದೆ.

## ದೃಶ್ಯ – 2

**(ಸೈಪ್ರಸ್ ತಲುಪಿದ ಒಥೆಲೊ ಮತ್ತು ಡೆಸ್ಡಿಮೋನ)**

**ಕ್ಯಾಸಿಯೋ :** ಈಗ ಒಂದು ಬಿರುಗಾಳಿಯು ಬಂದು ತುರ್ಕಿಯ ನೌಕಾ ಸೈನ್ಯವನ್ನೆಲ್ಲ ನಾಶವಾಗಿದೆ.

**ಒಥೆಲೊ :** ಹೌದೇ ಕ್ಯಾಸಿಯೋ ಹಾಗಾದರೆ ಈಗ ಯಾವ ವಿದೇಶಿ ಸೈನ್ಯದಿಂದಲೂ ನಮ್ಮ ನಗರಕ್ಕೆ ಅಪಾಯವಿಲ್ಲ.

(ಕ್ಯಾಸಿಯೊ ಒಥೆಲೊನ ಅತ್ಯಂತ ಆಪ್ತ ಸ್ನೇಹಿತರಲ್ಲಿ ಒಬ್ಬ. ಇವನು ಫ್ಲಾರಂಟೈನ್ ನ ಒಬ್ಬ ಧೀರ. ಸ್ತ್ರೀಯರು ತನ್ನನ್ನು ನೋಡಿ ಮೈಮರೆಯುವಂತೆ ಮಾಡುವುದರಲ್ಲಿ ನಿಷ್ಣಾತ. ಕ್ಯಾಸಿಯೊ ತನ್ನ ಡೆಸ್ಡಿಮೊನಳ ಬಳಿ ಇರುವುದನ್ನು ಕಂಡು ಬೇರೆ ಯಾವ ಪುರುಷನಿಗಾದರೂ ಅಸೂಯೆಯಾಗುತ್ತಿತ್ತು. ಆದರೆ ಅಥೆಲೊಗೆ ಅಸೂಯೆಯಾಗಲಿಲ್ಲ, ಅಲ್ಲದೆ ಡೆಸ್ಡಿಮೋನಳನ್ನು ಅಥವಾ ಕ್ಯಾಸಿಯೊನನ್ನು ಕುರಿತು ಅನುಮಾನ ಪಡಲು ಕಾರಣವೇ ಇರಲಿಲ್ಲ.)

**(ಡೆಸ್ಡಿಮೊನ ಮತ್ತು ಕ್ಯಾಸಿಯೊ ತಮಾಷೆಯ ಮಾತನಾಡುತ್ತಾ ನಗುತ್ತಾ ಕಾಲಕಳೆಯುವುದನ್ನು ಒಥೆಲೊ ಕಂಡರೂ ಕಾಣದಂತೆ ಹೋಗುತ್ತಾನೆ)**

**(ನಂತರ ಒಥೆಲೊ ಸಭೆ ಕರೆಯುತ್ತಾನೆ)**

**ಒಥೆಲೊ :** ಕ್ಯಾಸಿಯೊಗೆ ಲೆಫ್ಟಿನೆಂಟ್ ಪದವಿಯನ್ನು ನೀಡುತ್ತಿದ್ದೇನೆ. (ಸೈನ್ಯದ ಅನೇಕರು ಅಸಮಾಧಾನ ಪಡುತ್ತಾರೆ)

**ಇಯಾಗೊ :** ಸೇವೆಯಲ್ಲಿ ಹಿರಿಯನಾಗಿದ್ದರೂ ನನಗೆ ಈ ಸ್ಥಾನ ಕೊಡದೆ ತೀರ ಹೊಸಬನಾದ ಕ್ಯಾಸಿಯೊಗೆ ಈ ಸ್ಥಾನವನ್ನು ಕೊಡುತ್ತಿದ್ದಾನಲ್ಲ ಇವನ ಮೇಲೆ ಸೇಡು ತೀರಿಸಿಕೊಳ್ಳಲೇಬೇಕು. ದೇಹದಯಾತನೆಗಿಂತ ಮನಸ್ಸಿನಯಾತನೆ ಹೆಚ್ಚು ಹಿಂಸೆ ಕೊಡುತ್ತದೆ. ಹಾಗಾಗಿ ನಾನು ಡೆಸ್ಡಿಮೊನಳನ್ನು ಆಯುಧವಾಗಿ ಇಟ್ಟುಕೊಂಡು ಒಥೆಲೊ ಮತ್ತು ಕ್ಯಾಸಿಯೊನನ್ನು ಕೊಲ್ಲಲು ಮನಸ್ಸಿನಲ್ಲಿಯೇ ನಿರ್ಧರಿಸುತ್ತಾನೆ.

---

## ದೃಶ್ಯ – 3

**(ಸೈಪ್ರಸ್ ನೌಕಾಯಾನ ವಿಜಯದ ಸಂತೋಷ ಕೂಟ)**

**ಇಯಾಗೊ:** ರಾಡ್‌ರೀಗಜ್ ಡೆಸ್ಡಿಮೋನಳು ಒಥೆಲೊನನ್ನು ಮದುವೆಯಾಗಿದ್ದಾಳೆ. (ಈ ವಿಷಯ ಕೇಳಿ ರಾಡ್‌ರೀಗಜ್‌ನ ಹೃದಯ ಒಡೆದು ಹೋಯಿತು. ಎದೆ ಹಿಡಿದು ಕೆಳಗೆ ಕುಳಿತುಕೊಳ್ಳುತ್ತಾನೆ). ರಾಡ್‌ರೀಗಜ್ ಸಮಾಧಾನ ಮಾಡಿಕೊ, ನಿನ್ನಿಂದ ನನಗೆ ಸಹಾಯವಾಗಬೇಕಿದೆ.

**ರಾಡ್‌ರೀಗಜ್ :** ಏನು ಕೇಳು ಇಯಾಗೊ

**ಇಯಾಗೊ :** ನೀನು ಕ್ಯಾಸಿಯೊ ಮತ್ತು ಬಿಯಾಂಕಳ ಬಗ್ಗೆ ಲೇವಡಿಯ ಮಾತುಗಳನ್ನಾಡಿ ಕ್ಯಾಸಿಯೊನೊಡನೆ ಜಗಳವಾಡಬೇಕು.

**ರಾಡ್‌ರೀಗಜ್ :** ಆಯಿತು ಇಯಾಗೋ. ನಾನು ನಿನಗೆ ಸಹಾಯಮಾಡುತ್ತೇನೆ.

(ಮದ್ಯಪಾನ ಮಾಡುತ್ತಾ ಸಮೀಪದಲ್ಲೇ ಕುಳಿತಿದ್ದ ಕ್ಯಾಸಿನೋ ಬಳಿ ರಾಡ್‌ರೀಗಜ್ ಬರುತ್ತಾನೆ. ಕ್ಯಾಸಿಯೊ ಅತಿಯಾಗಿ ಮದ್ಯಪಾನ ಮಾಡಿದ್ದಾನೆ)

**ರಾಡ್‌ರೀಗಜ್ :** ಕ್ಯಾಸಿಯೋ ನಿನ್ನ ಪ್ರೇಯಸಿ ಬೇರೆಯವರೊಡನೆ ಸಲಿಗೆಯಿಂದ ಓಡಾಡುತ್ತಿರುತ್ತಾಳೆ.

**ಕ್ಯಾಸಿಯೊ :** ನಿನ್ನ ಮಾತು ಹಿಡಿತದಲ್ಲಿರಲಿ, ಏನು ಮಾತನಾಡುತ್ತಿದ್ದೀಯಾ?

**(ಅತಿರೇಕಗೊಂಡು ಇಬ್ಬರೂ ಪರಸ್ಪರ ಜಗಳವಾಡುತ್ತಾರೆ)**

**ಇಯಗೋ :** ಏನು ಮಾಡುತ್ತಿದ್ದೀರಿ? ಇಬ್ಬರೂ ಜಗಳವನ್ನು ನಿಲ್ಲಿಸಿ. ಇದನ್ನು ಒಥೆಲೊ ನೋಡಿದರೆ ಏನಾಗುತ್ತದೆ ಗೊತ್ತೇ? ದಯವಿಟ್ಟು ಇಬ್ಬರೂ ಈ ಕೂಡಲೇ ಜಗಳವನ್ನು ನಿಲ್ಲಿಸಿ.

**(ಆದರೂ ಜಗಳ ನಿಲ್ಲುವುದಿಲ್ಲ, ಆ ಕ್ಷಣ ಒಥೆಲೊ ಆಗಮನ)**

**(ಒಥೆಲೋ ಬಂದ ತಕ್ಷಣದಲ್ಲಿ ಜಗಳ ನಿಲ್ಲುತ್ತದೆ, ವಿಚಾರಣೆ ಆರಂಭವಾಗುತ್ತದೆ)**

**ಒಥೆಲೊ :** ಈ ಜಗಳವನ್ನು ಪ್ರಾರಂಭಮಾಡಿದವರಿಗೆ ತಕ್ಕ ಶಿಕ್ಷೆ ಆಗಲೇ ಬೇಕು.

**ಇಯಾಗೊ :** ಮೂರ್(ಒಥೆಲೊ) ಈ ರಾತ್ರಿ ಶಾಂತಿಯನ್ನು ಕಾಪಾಡಲು ನನ್ನನ್ನು ನೇಮಿಸಿದ್ದೀರಿ. ಆದರೆ ಈ ಜಗಳವನ್ನು ನಿಲ್ಲಿಸಲು ನಾನು ಸಮರ್ಥನಾಗಲಿಲ್ಲ ಆದ್ದರಿಂದ ತಪ್ಪೆಲ್ಲ ನನ್ನದೆ. ನೀವು ನನಗೆ ಶಿಕ್ಷೆ ಕೊಡಬೇಕು.

**ಒಥೆಲೊ :** (ಕ್ಯಾಸಿಯೊ ತಪ್ಪುಮಾಡಿದ್ದಾನೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ) (ಕೋಪದಲ್ಲಿ) ಕ್ಯಾಸಿಯೊ ನಿನ್ನ ಲೆಫ್ಟಿನೆಂಟ್ ಪದವಿಯನ್ನು ಈ ಕೂಡಲೇ ಹಿಂದಕ್ಕೆ ಪಡೆದು ನಿನ್ನನ್ನು ಗಡಿಪಾರು ಮಾಡುತ್ತಿದ್ದೇನೆ.

**ಇಯಾಗೋ :** ಕ್ಯಾಸಿಯೊನನ್ನು ದಯಮಾಡಿ ಕ್ಷಮಿಸಿ ತಪ್ಪು ನನ್ನದು. ನನಗೆ ಶಿಕ್ಷೆ ಕೊಡಿ.

**ಒಥೆಲೊ :** ಇಯಾಗೊ ನಿನ್ನ ತ್ಯಾಗದ ಬುದ್ಧಿಯನ್ನು ನೋಡಿ ನಿನ್ನ ಮೇಲೆ ಪ್ರೀತಿ ಹೆಚ್ಚಾಗಿ ನನಗೆ ತುಂಬಾ ಸಂತೋಷವಾಗುತ್ತಿದೆ. ಆದರೆ ಕ್ಯಾಸಿಯೊನ ತಪ್ಪನ್ನು ನಿನ್ನ ಮೇಲೆ ಹೊರೆಸಿ ಶಿಕ್ಷೆ ಕೊಡಲು ನಾನು ಸಿದ್ಧವಿಲ್ಲ.

**(ಒಥೆಲೊ ಮಾತ್ರ ಹೊರಟು ಹೋಗುತ್ತಾನೆ, ಇಯಾಗೊ ಮತ್ತು ಕ್ಯಾಸಿಯೊ ಅಲ್ಲಿ ಇರುತ್ತಾರೆ)**

**ಕ್ಯಾಸಿಯೊ :** (ಅಳುತ್ತಾ) ಇಯಾಗೊ ನಾನು ಕುಡಿದ ಅಮಲಿನಲ್ಲಿ ನನ್ನ ಸ್ಥಿಮಿತ ಕಳೆದುಕೊಂಡು ತಪ್ಪುಮಾಡಿದ್ದೇನೆ.

**ಇಯಾಗೊ :** ಕ್ಯಾಸಿಯೊ ದುಃಖಿಸಬೇಡ. ನೀನು ಈ ಶಿಕ್ಷೆಯಿಂದ ಪಾರಾಗಲು ನನ್ನಲ್ಲಿ ಒಂದು ಉಪಾಯವಿದೆ.

**ಕ್ಯಾಸಿಯೊ :** ಏನು ಉಪಾಯ ಇಯಾಗೊ? ದಯಮಾಡಿ ನನಗೆ ಸಹಾಯಮಾಡು.

**ಇಯಾಗೊ :** ಕ್ಯಾಸಿಯೊ, ಒಥೆಲೊ ಡೆಸ್ಡಿಮೋನಳನ್ನು ತನ್ನ ಪ್ರಾಣಕ್ಕಿಂತ ಅತಿಯಾಗಿ ಪ್ರೀತಿಸುತ್ತಾನೆ. ಮದುವೆಯಾದ ಮೇಲೆ ಹೆಂಡತಿಯರಿಗೆ ತಮ್ಮ ಗಂಡಂದಿರ ಮೇಲೆ ತುಂಬಾ ಪ್ರಭಾವವಿರುತ್ತದೆ ಹಾಗಾಗಿ ನೀನು ಡೆಸ್ಡಿಮೋನಳ ಬಳಿ ಹೋಗಿ ನಿನ್ನ ಸ್ಥಿತಿಯನ್ನು ವಿವರಿಸಿ ಮತ್ತೆ ಒಥೆಲೊನ ವಿಶ್ವಾಸವನ್ನು ಪಡೆದುಕೊಳ್ಳಲು ಸಹಾಯ ಮಾಡು ಎಂದು ಬೇಡಿಕೋ.

**ಕ್ಯಾಸಿಯೊ :** ಗೆಳೆಯ ನಿನಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು ಈಗಲೇ ನಾನು ಆ ಉದಾತ್ತ ಮಹಿಳೆಯನ್ನು ಭೇಟಿ ಮಾಡುತ್ತೇನೆ.

# ದೃಶ್ಯ – 4

**(ಒಥೆಲೊನ ಟೆಂಟ್)**

**ಕ್ಯಾಸಿಯೊ :** ಡೆಸ್ಟಿಮೊನ ನಾನು ಇಂದು ಕುಡಿದ ಮತ್ತಿನಲ್ಲಿ ಮಾಡಿದ ಅಪರಾಧಕ್ಕಾಗಿ ಮೂರ್(ಒಥೆಲೊ) ನನ್ನ ಲೆಫ್ಟಿನೆಂಟ್ ಪದವಿಯನ್ನು ಹಿಂದಕ್ಕೆ ಪಡೆದುಕೊಂಡು ನನ್ನನ್ನು ಗಡಿಪಾರು ಮಾಡಿದ್ದಾರೆ. ದಯಮಾಡಿ ನೀನು ನನಗೆ ಸಹಾಯ ಮಾಡಬೇಕು.

**ಡೆಸ್ಟಿಮೊನ :** (ಆಘಾತದಿಂದ) ನಾನು ಖಂಡಿತವಾಗಿ ನಿನ್ನ ವಿಷಯದಲ್ಲಿ ಒಥೆಲೊನೊಡನೆ ಮಾತನಾಡಿ ನಿನಗೆ ಸಹಾಯಮಾಡುತ್ತೇನೆ. ಚಿಂತಿಸಬೇಡ. ನೀನು ನಿಶ್ಚಿಂತೆಯಿಂದ ಹೊರಡು.

**(ಕ್ಯಾಸಿಯೊ ಹೊರಡುತ್ತಾನೆ, ಒಥೆಲೊನ ಆಗಮನವಾಗುತ್ತದೆ)**

**ಡೆಸ್ಟಿಮೊನ :** ಮೂರ್(ಒಥೆಲೊ) ಏಕೆ ನೀವು ದುಡುಕಿನ ನಿರ್ಧಾರ ತೆಗೆದುಕೊಂಡಿದ್ದೀರಿ. ದಯಮಾಡಿ ನೀವು ಮೈಕಲ್ ಕ್ಯಾಸಿಯೊನನ್ನು ಕ್ಷಮಿಸಿ ಅವನ ಸ್ಥಾನವನ್ನು ಮರಳಿ ಕೊಡಬೇಕೆಂದು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

**ಒಥೆಲೊ :** ಡೆಸ್ಟಿಮೊನ, ಈ ವಿಷಯವನ್ನು ಕುರಿತು ಮತ್ತೆಂದಾದರೂ ಮಾತನಾಡೋಣ. ಇಂದು ಈ ವಿಷಯ ಬೇಡ.

**ಡೆಸ್ಟಿಮೊನ:** ಇಲ್ಲ, ನೀವು ನಾಳೆಯೇ ಕ್ಯಾಷಿಯೊನನ್ನು ಇಲ್ಲಿಗೆ ಕರೆಸಬೇಕು. ದಯಮಾಡಿ ಇನ್ನು ತಡಮಾಡಬೇಡಿ.

**ಒಥೆಲೊ :** ಡೆಸ್ಟಿಮೊನ, ಇಂದು ಏಕೆ ಇಷ್ಟು ಹಠಮಾಡುತ್ತಿರುವೆ? (ಮೌನವಾಗುತ್ತಾನೆ) ಆಯಿತು ನಿನಗೆ ಬೇಸರ ಮಾಡುವುದು ನನಗೆ ಇಷ್ಟವಿಲ್ಲ. ನಾಳೆಯೇ ಕ್ಯಾಸಿಯೊನನ್ನು ಕರೆಯಿಸಿ ಮಾತನಾಡುತ್ತೇನೆ.

**ಡೆಸ್ಟಿಮೊನ:** (ಸಂತೋಷದಿಂದ) ಧನ್ಯವಾದ ಮೂರ್,

**(ಮರುದಿನ ಡೆಸ್ಟಿಮೊನಳನ್ನು ಕ್ಯಾಸಿಯೊ ಭೇಟಿಯಾಗುತ್ತಾನೆ)**

**ಡೆಸ್ಟಿಮೊನ:** ಕ್ಯಾಸಿಯೊ ನಿನಗೊಂದು ಶುಭಸುದ್ದಿ. ಅದೇನೆಂದರೆ ಮೂರ್(ಒಥೆಲೊ) ನಿನ್ನೊಡನೆ ಮಾತನಾಡಲು ಒಪ್ಪಿದ್ದಾರೆ. ಹಾಗಾಗಿ ಹೆದರಬೇಡ. ಮೂರ್(ಒಥೆಲೊ) ನಿನ್ನನ್ನು ಮೊದಲಿನಂತೆ ವಿಶ್ವಾಸದಿಂದ ಕಾಣುತ್ತಾರೆ.

**ಕ್ಯಾಸಿಯೊ :** ನಿನ್ನಿಂದ ಬಹಳ ಉಪಕಾರವಾಯಿತು ಡೆಸ್ಟಿಮೊನ ಧನ್ಯವಾದಗಳು. ನಾ ಇನ್ನು ಹೊರಡುತ್ತೇನೆ.

**(ಕ್ಯಾಸಿಯೊ ಹೊರಡುವ ಸಮಯಕ್ಕೆ ಸರಿಯಾಗಿ ಒಥೆಲೊ ಮತ್ತು ಇಯಾಗೊ ಮನೆಯೊಳಗೆ ಪ್ರವೇಶಿಸುತ್ತಾರೆ)**

**ಇಯಾಗೊ :** (ಕ್ಯಾಸಿಯೊ ಡೆಸ್ಟಿಮೊನಳ ಕೊಠಡಿಯಿಂದ ಹೊರಗೆ ಹೋಗುತ್ತಿರುವುದನ್ನು ಕಂಡು) "ಇದು ನನಗೆ ಇಷ್ಟವಾಗುವುದಿಲ್ಲ"

**ಒಥೆಲೊ :** ಇಯಾಗೊ ಏಕೆ ಹೀಗೆ ಹೇಳುತ್ತಿರುವೆ? ನಿನ್ನ ಈ ಮಾತಿನ ಕಾರಣವೇನು?

**ಇಯಾಗೊ :** ಏನಿಲ್ಲ ಮೂರ್(ಒಥೆಲೊ) ಸುಮ್ಮನೆ ಹೇಳಿದೆ.

**ಒಥೆಲೊ :** ಇಲ್ಲ, ನೀನು ಕಾರಣವಿಲ್ಲದೆ ಈ ರೀತಿ ಹೇಳುವುದಿಲ್ಲ. ನಿನ್ನ ಮನಸ್ಸಿನಲ್ಲಿ ಇರುವ ವಿಚಾರವನ್ನು ಹೇಳು

**ಇಯಾಗೊ :** ಏನಿಲ್ಲ ಮೂರ್(ಒಥೆಲೊ) ಅದು ಕ್ಯಾಸಿಯೊ ಡೆಸ್ಟಿಮೊನಳ ಜೊತೆಗೆ ಅಷ್ಟೊಂದು ಸಮಯವನ್ನು ಕಳೆಯುವುದು ನನಗೆ ಇಷ್ಟವಾಗುವುದಿಲ್ಲ. ಏನೇ ಆಗಲಿ ಕ್ಯಾಸಿಯೊ ಇನ್ನೂ ತರುಣ. ಇದೇ ಅವನ ಆಕರ್ಷಣೆಯ ವಿಷಯ.

**ಒಥೆಲೊ :** (ಬೇಸರ ಮತ್ತು ಸಂಶಯದಿಂದ) ಅವರಿಬ್ಬರ ನಡುವೆ ಸಂಶಯಪಡುವಂತಹ ಯಾವುದೇ ವಿಷಯವಿಲ್ಲ. ಆದ್ದರಿಂದ ಈ ವಿಷಯವಾಗಿ ಚಿಂತಿಸುವ ಕಾರಣವಿಲ್ಲ.

---

# ದೃಶ್ಯ – 5

**ಎಮಿಲಿ :** (ಒಂದು ಕರವಸ್ತ್ರವನ್ನು ತನ್ನ ಗಂಡ ಇಯಾಗೊನಿಗೆ ತೋರಿಸುತ್ತಾ) ಈ ಕರವಸ್ತ್ರ ಯಾರಿಗೆ ಸೇರಿದ್ದು, ಎಂದು ನಿಮಗೇನಾದರೂ ಗೊತ್ತೆ?

**ಇಯಾಗೊ :** (ಇದು ಡೆಸ್ಟಿಮೊನಳಿಗೆ ಒಥೆಲೊ ಪ್ರೀತಿಯಿಂದ ಕೊಟ್ಟ ವಿಶೇಷ ಉಡುಗೊರೆ ಅವಳ ಪ್ರಾಣ ಎಂಬುದನ್ನು ನೆನಪಿಸಿಕೊಂಡು) ನನಗೆ ತಿಳಿಯದು.

**(ಎಮಿಲಿ ನಿರ್ಗಮನ, ಕ್ಯಾಸಿಯೊನ ಆಗಮನ)**

**ಇಯಾಗೊ :** ಕ್ಯಾಸಿಯೊ ನೀನು ಮತ್ತೆ ಒಥೆಲೊನ ಆಪ್ತನಾಗುವಂತೆ ಡೆಸ್ಟಿಮೊನ ಖಂಡಿತ ಮಾಡುತ್ತಾಳೆ. ನೀನು ಭಯಪಡಬೇಡ ಸಂತೋಷವಾಗಿರು.

**ಕ್ಯಾಸಿಯೊ :** (ಸಂತೋಷ, ಉತ್ಸಾಹದಿಂದ) ಹೌದು ಇಯಾಗೊ ಎಲ್ಲವೂ ಒಳ್ಳೆಯದೆ ಆಗುತ್ತದೆ. ಆ ಭರವಸೆ ನನಗಿದೆ.

**ಇಯಾಗೊ :** ಕ್ಯಾಸಿಯೊ, ನೀನು ನಿನ್ನ ಪ್ರೀತಿಯ ಬಿಯಾಂಕಳೊಡನೆ ಹೆಚ್ಚು ಕಾಲ ಕಳೆದು ಸ್ವಲ್ಪ ಹೊತ್ತಾದರೂ ನಿನ್ನ ತೊಂದರೆಗಳನ್ನು ಮರೆ. ಇಗೋ ಈ ಕರವಸ್ತ್ರವನ್ನು ನಿನ್ನ ಬಿಯಾಂಕಳಿಗೆ ಕೊಡು ಆಗ ಅವಳಿಗೆ ನಿನ್ನ ಮೇಲೆ ಪ್ರೀತಿ ಇನ್ನೂ ಹೆಚ್ಚಾಗುತ್ತದೆ.

**ಕ್ಯಾಸಿಯೊ :** (ಸಂತೋಷದಿಂದ) ಈ ಜಗತ್ತಿನಲ್ಲಿ ನನ್ನ ಅತ್ಯುತ್ತಮ ಸ್ನೇಹಿತನೆಂದರೆ ನೀನೆ. ನಿನ್ನನ್ನು ಸ್ನೇಹಿತನಾಗಿ ಪಡೆದಿದ್ದಕ್ಕಾಗಿ ನಾನು ನಿನಗೆ ಕೃತಜ್ಞತೆ ಸಲ್ಲಿಸುತ್ತೇನೆ.

**(ಕ್ಯಾಸಿಯೊ ಬಿಯಾಂಕಳ ಮನೆಗೆ ಹೊರಡುತ್ತಾನೆ, ಒಥೆಲೊ ಆಗಮನ)**

**ಇಯಾಗೊ :** ಮೂರ್(ಒಥೆಲೊ) ಆ ತರುಣ ಕ್ಯಾಸಿಯೊ ಬಹು ಗೌರವಕ್ಕೆ ಅರ್ಹನಾದವನು. ತನ್ನ ಪ್ರೇಯಸಿ ಬಿಯಾಂಕಳಿಗೆ ಹಲವು ಉಡುಗೊರೆಗಳನ್ನು ಕೊಟ್ಟಿದ್ದಾನೆ. ಆದರೆ ಕೆಲವು ದಿನಗಳ ಕೆಳಗೆ ಅವನು ಅವಳಿಗೆ ಒಂದು ಸುಂದರವಾದ ಕರವಸ್ತ್ರವನ್ನು ಉಡುಗೊರೆಯಾಗಿ ಕೊಟ್ಟಿದ್ದಾನೆ. ಅದು ನೀವು ಡೆಸ್ಡಿಮೊನಳಿಗೆ ಕೊಟ್ಟ ಕರವಸ್ತ್ರವನ್ನೇ ಹೋಲುತ್ತದೆ.

**ಒಥೆಲೊ :** (ಆಶ್ಚರ್ಯ ಮತ್ತು ಕೋಪದಿಂದ) ನಾನು ಡೆಸ್ಡಿಮೊನಳಿಗೆ ಕೊಟ್ಟ ಕರವಸ್ತ್ರವೇ ಅದು ಎಂದು ಹೇಗೆ ಹೇಳಲು ಸಾಧ್ಯ?

**ಇಯಾಗೊ :** ಮೂರ್ ಆ ಕರವಸ್ತ್ರವು ಒಬ್ಬ ಸುಂದರ ಸ್ತ್ರೀಯು ತನಗೆ ಕೊಟ್ಟ ಉಡುಗೊರೆ ಎಂದು ಕ್ಯಾಸಿಯೊ ಎಲ್ಲರಿಗೂ ತೋರಿಸುತ್ತಿದ್ದನು.

**ಒಥೆಲೊ :** ಈಗ ನನಗೆ ಅವರಿಬ್ಬರ ಮೇಲೆ ಸಂಶಯ ಮೂಡುತ್ತಿದೆ.

**ಇಯಾಗೊ :** ಸುಮ್ಮನೆ ಅನುಮಾನಪಡುವುದು ಬೇಡ ಮೂರ್. ಮೊದಲು ಇದರಲ್ಲಿ ಸತ್ಯಾಂಶವಿದೆಯೇ ಎಂದು ನೋಡೋಣ.

**ಒಥೆಲೊ :** ಸರಿ ನಾನು ಇಂದು ರಾತ್ರಿಯೇ ಇದರ ಬಗ್ಗೆ ಡೆಸ್ಡಿಮೊನಳನ್ನು ಪ್ರಶ್ನಿಸುತ್ತೇನೆ.

**ಇಯಾಗೊ :** ಮೂರ್ ಈವಾಗ ನೀವು ಚಿಂತಿಸಬೇಡಿ. ಆ ದುಷ್ಟ ಲೆಫ್ಟಿನೆಂಟ್ ವಿಷಯವನ್ನು ನೀವು ಮತ್ತೆ ಕೇಳದಿರುವಂತೆ ಅವನ ಕೊಲೆಯ ಏರ್ಪಾಡನ್ನು ಮಾಡುತ್ತೇನೆ. ಧೈರ್ಯವಾಗಿರಿ.

---

## ದೃಶ್ಯ – 6

**(ಒಥೆಲೊನ ಅರಮನೆಯ ಡೆಸ್ಡಿಮೊನಳ ಕೊಠಡಿ)**

**ಡೆಸ್ಡಿಮೊನ :** ಮೂರ್ ಇಂದು ಏಕೆ ಇಷ್ಟು ಸೊರಗಿದ್ದೀರಿ?

**ಒಥೆಲೊ :** ನನಗೆ ಆರೋಗ್ಯ ಸರಿ ಇಲ್ಲ. ಯಾಕೋ ಬೆವರುತ್ತಿದ್ದೇನೆ. ನನ್ನ ಹಣೆಯನ್ನು ಒರಸಿಕೊಳ್ಳಲು ನಾನು ನಿನಗೆ ಉಡುಗೊರೆಯಾಗಿ ನೀಡಿದ್ದ ಕರವಸ್ತ್ರವನ್ನು ಕೊಡು.

**ಡೆಸ್ಡಿಮೊನ :** (ಬೇಸರದಿಂದ) ಆ ಕರವಸ್ತ್ರ ಕಳೆದು ಹೋಯಿತು.

**ಒಥೆಲೊ :** ನಿನ್ನ ಪ್ರೇಮದ ಗುರುತಿಗಾಗಿ ಅದನ್ನು ಕ್ಯಾಸಿಯೊಗೆ ಕೊಟ್ಟಿದ್ದೀಯಾ ಅಲ್ಲವೇ?

**ಡೆಸ್ಡಿಮೊನ :** (ದುಃಖಿತಳಾಗಿ)ನಾನು ನಿಮ್ಮನ್ನು ನನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತೇನೆ. ಅಂತಹದರಲ್ಲಿ ನಾನು ಬೇರೊಬ್ಬರನ್ನು ಪ್ರೀತಿಸುತ್ತಿದ್ದೇನೆ. ಎಂದು ನೀವು ಹೇಗೆ ಆಪಾದನೆ ಹೊರೆಸುತ್ತಿದ್ದೀರಿ. ಇದನ್ನು ನಂಬಲು ನನಗೆ ಸಾಧ್ಯವಾಗುತ್ತಿಲ್ಲ.

**ಒಥೆಲೊ :** ನೀನು ನನಗೆ ಮೋಸ ಮಾಡಿದೆ.(ತಲೆ ದಿಂಬಿನಿಂದ ಡೆಸ್ಡಿಮೊನಳನ್ನು ಉಸಿರುಗಟ್ಟಿಸಿ ಹಾಸಿಗೆ ಮೇಲೆ ಕೊಲ್ಲುತ್ತಾನೆ.

**(ಕೊಠಡಿಗೆ ಎಮಿಲಿ ಆಗಮನ)**

**ಎಮಿಲಿ :** (ಬಾಗಿಲ ಬಳಿಯಿಂದಲೇ) ಯಜಮಾನಿಯವರೇ ನಿಮಗೆ ಇನ್ನೇನಾದರೂ ಬೇಕೇ? ಎಂದು ಪ್ರವೇಶಿಸುತ್ತಾಳೆ.

**(ಡೆಸ್ಡಿಮೊನಳ ಮೃತ ದೇಹವನ್ನು ಕಂಡು ಗಟ್ಟಿಯಾಗಿ ಅಳಲು ಪ್ರಾರಂಭಿಸಿದಳು)**

**ಒಥೆಲೊ :** ಡೆಸ್ಡಿಮೊನ ಕ್ಯಾಸಿಯೊಡನೆ ಸೇರಿ ನನಗೆ ಮೋಸ ಮಾಡಿದಳು. ನಾನು ಕೊಟ್ಟ ಪ್ರೀತಿಯ ಕರವಸ್ತ್ರ ಉಡುಗೊರೆಯನ್ನು ತನ್ನ ಪ್ರೇಮಿ ಕ್ಯಾಸಿಯೊಗೆ ನೀಡಿದ್ದಾಳೆ.

**ಎಮಿಲಿ :** ಮೂರ್ ನೀವು ತಪ್ಪು ತಿಳಿದ್ದೀರಿ? ನೀವು ದುಡುಕಿ ನಿರ್ಧಾರ ತೆಗೆದುಕೊಂಡುಬಿಟ್ಟಿದ್ದೀರಿ.
ಆ ಕರವಸ್ತ್ರ ನನಗೆ ಸಿಕ್ಕಿತು. ಅದನ್ನು ನಾನು ಇಯಾಗೊಗೆ ಕೊಟ್ಟಿದ್ದೆ.

**ಒಥೆಲೊ :** (ತನ್ನ ತಪ್ಪಿನ ಅರಿವಾಗಿ) ನನ್ನ ಅಸೂಯೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲಾಗದೆ ನನ್ನ ನಿರಪರಾಧಿ ಪತ್ನಿಯನ್ನು ಕೊಂದುಬಿಟ್ಟೆನಲ್ಲ. ಈ ಪಾಪ ಕೃತ್ಯಗಳನ್ನು ಮಾಡಿ ನಾನು ಬದುಕುವುದಿಲ್ಲ.

**(ತನ್ನ ಕತ್ತಿಯಿಂದ ಗಂಟಲನ್ನು ಕತ್ತರಿಸಿಕೊಂಡು ಡೆಸ್ಡಿಮೊನಳ ಮೃತದೇಹದ ಮೇಲೆ ಬೀಳುತ್ತಾನೆ)**

**(ಅರಮನೆಯ ಹೊರಗೆ)**

ಕ್ಯಾಸಿಯೊನನ್ನು ಕೊಲ್ಲಲು ಇಯಾಗೊ ಅವನನ್ನು ಓಡಿಸಿಕೊಂಡು ಬರುತ್ತಾನೆ. ಕ್ಯಾಸಿಯೊ ಇಯಾಗೊನಿಂದ ತಪ್ಪಿಸಿಕೊಂಡು ಕುಂಟುತ್ತಾ ಬಹು ಪ್ರಯಾಸದಿಂದ ಅರಮನೆ ಪ್ರವೇಶಿಸುತ್ತಾನೆ. ಇವನನ್ನು ಹಿಡಿಯಲು ಬಂದ ಇಯಾಗೊನನ್ನು ಕಾವಲು ರಕ್ಷಕರು ಬಂಧಿಸುತ್ತಾರೆ? ನನ್ನ ವಿಷಯವನ್ನು ಎಮಿಲಿ ಎಲ್ಲರಿಗೂ ತಿಳಿಸಿದ್ದಾಳೆ ಎಂಬುದನ್ನು ಊಹಿಸಿದ ಇಯಾಗೊ ಅವಳನ್ನು ಕತ್ತಿಯಿಂದ ತಿವಿದು ಸಾಯಿಸುತ್ತಾನೆ.

ಒಥೆಲೊ, ಡೆಸ್ಡಿಮೊನ ಮತ್ತು ಎಮಿಲಿಯನ್ನು ಕೊಂದದ್ದು ಇಯಾಗೊ ಎಂದು ಆಪಾದನೆ ಒರೆಸಿ ಅವನಿಗೆ ಭಯಂಕರ ಸಾವಿನ ಶಿಕ್ಷೆಯನ್ನು ಕೊಡಲಾಯಿತು.

* * * * * * * * * * * * *